# ಮಾದರಿ ಪ್ರಶ್ನೆ ಪತ್ರಿಕೆ

## ಮೊದಲನೇ ಸಂಕಲನಾತ್ಮಕ ಮೌಲ್ಯಮಾಪನ (SA 1)

ತರಗತಿ: 10ನೇ ತರಗತಿ | 2022–23 | ವಿಷಯ: ಸಮಾಜ ವಿಜ್ಞಾನ

ಅಂಕಗಳು: 80 | ಸಮಯ: 3 ಗಂಟೆ


ಮಹಾದೇವಪ್ಪ ಕುಂದರಗಿ

ಸರ್ಕಾರಿ ಪ್ರೌಢ ಶಾಲೆ ಆವತಿ

ಚಿಕ್ಕಮಗಳೂರು ತಾ&ಜಿ

ಮೊ: 9481216233

# ಮೊದಲನೇ ಸಂಕಲನಾತ್ಮಕ ಮೌಲ್ಯಮಾಪನ (SA 1)

**ತರಗತಿ: 10ನೇ ತರಗತಿ** **2022–23** **ವಿಷಯ: ಸಮಾಜ ವಿಜ್ಞಾನ**

**ಅಂಕಗಳು: 80** **ಸಮಯ: 3 ಗಂಟೆ**

---

## I. ಈ ಪ್ರಶ್ನೆಗಳಿಗೆ ನಾಲ್ಕು ಪರ್ಯಾಯ ಉತ್ತರಗಳನ್ನು ನೀಡಿದ್ದು, ಸರಿಯಾದ ಉತ್ತರವನ್ನು ಆರಿಸಿ ಬರೆಯಿರಿ: 8x1=8

1. ಸಹಾಯಕ ಸೈನ್ಯ ಪದ್ಧತಿಗೆ ಸಹಿ ಹಾಕಿದ ಮೊದಲ ರಾಜ್ಯ

   A) ಆರ್ಕಾಟ್ B) ಮೈಸೂರು C) ಹೈದರಾಬಾದ್ D) ಪಂಜಾಬ್

2. ಬ್ರಿಟಿಷ್ ಶಿಕ್ಷಣದ ಪರಿಣಾಮವಾಗಿ ಜೆ.ಎಸ್.ಮಿಲ್, ರೂಸೋ, ಮಾಂಟೆಸ್ಕ್ಯೂ ಮುಂತಾದವರ ಚಿಂತನೆಗಳು ಭಾರತೀಯ ವಿದ್ಯಾವಂತರಲ್ಲಿ

   A) ಕ್ರಾಂತಿಕಾರಿ ಚಿಂತನೆಗಳನ್ನು ತಂದವು. B) ಪ್ರಾದೇಶಿಕವಾದವನ್ನು ಪ್ರಚೋಧಿಸಿದವು.

   C) ಉಗ್ರ ರಾಷ್ಟ್ರೀಯತೆಯನ್ನು ಬೆಳೆಸಿದವು. D) ಆಲೋಚನಾ ಕ್ರಮದಲ್ಲಿ ನಾವಿನ್ಯತೆ ತಂದವು.

3. 1962ರಲ್ಲಿ ಭಾರತ ಮತ್ತು ಚೀನಾ ಯುದ್ಧಕ್ಕೆ ಪ್ರಮುಖ ಕಾರಣವೆಂದರೆ

   A) ಗಡಿ ಸಮಸ್ಯೆ ಉಲ್ಬಣಗೊಂಡಿದ್ದು B) ಚೀನಾದಲ್ಲಿ ಬೌದ್ಧ ಧರ್ಮದ ಪ್ರಚಾರ

   C) ಟಿಬೆಟ್ ವಿವಾದ ಉಲ್ಬಣಗೊಂಡಿದ್ದು D) ಪಂಚಶೀಲ ತತ್ವಗಳ ಅಂಗೀಕಾರ

4. "ಮಾನವಕುಲ ತಾನೊಂದೇ ವಲಂ" ಎಂದವರು

   A) ಪ್ಲೇಟೋ B) ಆದಿಕವಿ ಪಂಪ C) ಅಂಬೇಡ್ಕರ್ D) ಗಾಂಧೀಜಿ

5. ಕೇಂದ್ರ ಸರ್ಕಾರವು 'ಸಮಾನ ವೇತನ ಕಾಯ್ದೆ'ಯನ್ನು ಜಾರಿಗೆ ತಂದ ವರ್ಷ

   A) 1955 B) 1976 C) 1986 D) 1989

6. ಭಾರತದಲ್ಲಿ ವ್ಯಾಪಾಕವಾಗಿ ಹಂಚಿಕೆಯಾಗಿರುವ ಅರಣ್ಯಗಳು

   A) ಮ್ಯಾಂಗ್ರೋವ್ ಅರಣ್ಯಗಳು B) ನಿತ್ಯಹರಿದ್ವರ್ಣದ ಅರಣ್ಯಗಳು

   C) ಎಲೆ ಉದುರಿಸುವ ಮಾನ್ಸೂನ್ ಅರಣ್ಯಗಳು D) ಪರ್ವತ ಅರಣ್ಯಗಳು

7. 20ನೇ ಶತಮಾನದಲ್ಲಿ ಸರ್ಕಾರಗಳು ಆರ್ಥಿಕ ಯೋಜನೆಗಳನ್ನು ಬಳಕೆಗೆ ತಂದ ಮುಖ್ಯ ಉದ್ದೇಶ

   A) ಶೀಘ್ರ ಆರ್ಥಿಕ ಅಭಿವೃದ್ಧಿ B) ಜನಸಂಖ್ಯಾ ನಿಯಂತ್ರಣ

   C) ಭ್ರಷ್ಟಾಚಾರ ನಿರ್ಮೂಲನೆ D) ಸಾವಯವ ಕೃಷಿಗೆ ಉತ್ತೇಜನ

8. ಈ ಖಾತೆಯ ಠೇವಣಿಗಳಿಗೆ ಬ್ಯಾಂಕುಗಳು ಬಡ್ಡಿಯನ್ನು ಕೊಡುವುದಿಲ್ಲ

   A) ನಿಶ್ಚಿತ ಠೇವಣಿ ಖಾತೆ B) ಆವರ್ತ ಠೇವಣಿ ಖಾತೆ C) ಉಳಿತಾಯ ಖಾತೆ D) ಚಾಲ್ತಿ ಖಾತೆ

## II. ಈ ಕೆಳಗಿನ ಪ್ರಶ್ನೆಗಳಿಗೆ ಒಂದೊಂದು ವಾಕ್ಯಗಳಲ್ಲಿ ಉತ್ತರಿಸಿರಿ: 8x1=8

9. ಮಧ್ಯಕಾಲದಲ್ಲಿ ಯುರೋಪಿನ ದೇಶಗಳ ವ್ಯಾಪಾರದ ಮೇಲೆ ಏಕಸ್ವಾಮ್ಯ ಸಾಧಿಸಿದ್ದವರು ಯಾರು?
10. ರಾಮಕೃಷ್ಣ ಮಿಷನ್ ಅನ್ನು ಏಕೆ ಸ್ಥಾಪಿಸಲಾಯಿತು?
11. ಕರ್ನಾಟಕದಲ್ಲಿ ಭ್ರಷ್ಟಾಚಾರ ನಿಯಂತ್ರಣಕ್ಕಾಗಿ ಸ್ಥಾಪಿಸಿದ ಸಂಸ್ಥೆ ಯಾವುದು?
12. ವಿಶೇಷ ಪರಿಣತಿ ಎಂದರೇನು?
13. ಭಾರತದಲ್ಲಿ ಅತಿ ಕಡಿಮೆ ಮಳೆ ಪಡೆಯುವ ಪ್ರದೇಶ ಯಾವುದು?
14. ಹಿರಾಕುಡ್ ಯೋಜನೆಯನ್ನು ಯಾವ ನದಿಗೆ ನಿರ್ಮಿಸಲಾಗಿದೆ?
15. ಡಾ. ಎಂ.ಎಸ್.ಸ್ವಾಮಿನಾಥನ್ ರವರನ್ನು ಭಾರತದ ಹಸಿರು ಕ್ರಾಂತಿ ಪಿತಾಮಹ ಎಂದು ಕರೆಯುತ್ತಾರೆ. ಏಕೆ?
16. ಭಾರತದ ರಿಸರ್ವ್ ಬ್ಯಾಂಕನ್ನು 'ಬ್ಯಾಂಕುಗಳ ಬ್ಯಾಂಕು' ಎಂದು ಏಕೆ ಕರೆಯುತ್ತಾರೆ?

## III. ಈ ಕೆಳಗಿನ ಪ್ರತಿಯೊಂದು ಪ್ರಶ್ನೆಗೂ ಎರಡರಿಂದ ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿರಿ: 8x2=16

17. 1919ರ ಕಾಯ್ದೆಯ ಪ್ರಮುಖಾಂಶಗಳು ಯಾವುವು?
18. 4ನೇ ಆಂಗ್ಲೋ–ಮೈಸೂರು ಯುದ್ಧದ ಪರಿಣಾಮಗಳು ವಿವರಿಸಿ.
19. ಭಾರತ ಮತ್ತು ಪಾಕಿಸ್ತಾನದ ಮಧ್ಯೆ ಉದ್ವಿಘ್ನತೆಗೆ ಕಾರಣವಾದ ವಿಷಯಗಳು ಯಾವುವು? ಅಥವಾ

    ಭಾರತ ಮತ್ತು ರಷ್ಯಾ ಸಂಬಂಧವನ್ನು ವಿವರಿಸಿ
20. ನಿರುದ್ಯೋಗಕ್ಕೆ ಕಾರಣಗಳೇನು? ಅಥವಾ ಅಸಂಘಟಿತ ದುಡಿಮೆಗಾರರು ಅನೇಕ ಸಮಸ್ಯೆಗಳಿಗೆ ಒಳಗಾಗುತ್ತಿದ್ದಾರೆ. ಏಕೆ?
21. ಭಾರತದ ನಾಲ್ಕು ಪ್ರಾಕೃತಿಕ ವಿಭಾಗಗಳನ್ನು ಹೆಸರಿಸಿ.
22. ಭಾರತದ ವ್ಯವಸಾಯವು 'ಮಾನ್ಸೂನ್ ಮಾರುತಗಳೊಡನೆ ಆಡುವ ಜೂಜಾಟವಾಗಿದೆ.' ಚರ್ಚಿಸಿರಿ.
23. ಕೃಷಿ ವಲಯವು ಎದುರಿಸುತ್ತಿರುವ ಸಮಸ್ಯೆಗಳಿಗೆ ಪರಿಹಾರಗಳೇನು?
24. ಉಳಿತಾಯ ಖಾತೆಯು ಚಾಲ್ತಿ ಖಾತೆಗಿಂತ ಭಿನ್ನವಾಗಿದೆ. ಹೇಗೆ?

## IV. ಈ ಕೆಳಗಿನ ಪ್ರತಿಯೊಂದು ಪ್ರಶ್ನೆಗೂ ಆರು ವಾಕ್ಯಗಳಲ್ಲಿ ಉತ್ತರಿಸಿರಿ: 9x3=27

25. ಪ್ಲಾಸಿ ಕದನಕ್ಕೆ ಕಾರಣ ಮತ್ತು ಪರಿಣಾಮಗಳನ್ನು ವಿವರಿಸಿ. ಅಥವಾ

    ಚಿಕ್ಕ ದೇವರಾಜ ಒಡೆಯರ್ ರವರ ಸಾಧನೆಗಳನ್ನು ವಿವರಿಸಿ.
26. ಸಹಾಯಕ ಸೈನ್ಯ ಪದ್ಧತಿಯು ದೇಶೀಯ ದೊರೆಗಳನ್ನು ಬ್ರಿಟಿಷರ ನಿಯಂತ್ರಣಕ್ಕೆ ಒಳಪಡಿಸಿತು. ಹೇಗೆ?
27. ಸಂಗೊಳ್ಳಿ ರಾಯಣ್ಣನು ಸ್ವಾತಂತ್ರ್ಯ ಹೋರಾಟದಲ್ಲಿ ಹೋರಾಡಿದ ಕ್ರಮವನ್ನು ವಿವರಿಸಿ.
28. "ಮಹಿಳೆಯರ ಸ್ಥಾನಮಾನ ಉತ್ತಮಪಡಿಸಲು ಸರ್ಕಾರ ಬದ್ಧವಾಗಿದೆ." ಸಮರ್ಥಿಸಿ.
29. ಅಸ್ಪೃಶ್ಯತೆ ನಿವಾರಣೆಗೆ ನಮ್ಮ ಸರ್ಕಾರವು ಕೈಗೊಂಡಿರುವ ಕ್ರಮಗಳನ್ನು ವಿವರಿಸಿ.
30. ಪೂರ್ವಘಟ್ಟ ಮತ್ತು ಪಶ್ಚಿಮ ಘಟ್ಟಗಳಿಗಿರುವ ವ್ಯತ್ಯಾಸಗಳನ್ನು ತಿಳಿಸಿ.
31. ಮಣ್ಣಿನ ಸವೆತವನ್ನು ತಡೆಗಟ್ಟಬಹುದಾದ ಕ್ರಮಗಳೇನು? ಅಥವಾ ಅರಣ್ಯಗಳನ್ನು ಹೇಗೆ ಸಂರಕ್ಷಿಸಬಹುದು?
32. ಪಂಚವಾರ್ಷಿಕ ಯೋಜನೆಗಳ ಉದ್ದೇಶಗಳನ್ನು ತಿಳಿಸಿ. ಅಥವಾ

    ಪಂಚವಾರ್ಷಿಕ ಯೋಜನೆಗಳ ಸಾಧನೆಗಳನ್ನು ವಿವರಿಸಿ.
33. ಬ್ಯಾಂಕ್ ಖಾತೆಯನ್ನು ಹೊಂದುವುದರಿಂದ ಆಗುವ ಪ್ರಯೋಜನಗಳೇನು? ಅಥವಾ

    ಅಂಚೆ ಕಚೇರಿಗಳು ಕೈಗೊಳ್ಳುವ ಹಣಕಾಸಿನ ಕಾರ್ಯಗಳನ್ನು ವಿವರಿಸಿ.

## V. ಈ ಕೆಳಗಿನ ಪ್ರಶ್ನೆಗೆ ಎಂಟರಿಂದ ಹತ್ತು ವಾಕ್ಯಗಳಲ್ಲಿ ಉತ್ತರಿಸಿರಿ: 4x4=16

34. ಜಮೀನ್ದಾರಿ ಪದ್ಧತಿಗಿಂತ ರೈತವಾರಿ ಪದ್ಧತಿಯು ಭಿನ್ನ. ಹೇಗೆ?
35. ನಾಲ್ವಡಿ ಕೃಷ್ಣರಾಜ ಒಡೆಯರ್ ಕಾಲದ ಸಾಧನೆಗಳನ್ನು ವಿವರಿಸಿ ಅಥವಾ

    ರಾಜಾ ರಾಮಮೋಹನ್ ರಾಯರನ್ನು 'ಭಾರತೀಯ ನವೋದಯದ ಜನಕ' ಎಂದು ಕರೆಯಲು ಕಾರಣವೇನು?
36. ಕೋಮುವಾದದಿಂದ ಉಂಟಾಗುವ ದುಷ್ಪರಿಣಾಮಗಳನ್ನು ವಿವರಿಸಿ.
37. ಭಾರತ ಸರ್ಕಾರವು ವಿವಿಧೋದ್ದೇಶ ನದಿ ಕಣಿವೆ ಯೋಜನೆಗಳನ್ನು ಏಕೆ ಕೈಗೊಳ್ಳುತ್ತದೆ?

## VI. ೩೮. ಭಾರತದದ ನಕ್ಷೆ ಬರೆದು, ಈ ಕೆಳಗಿನವುಗಳನ್ನು ಗುರುತಿಸಿ. 1+4=4

a) ಕರ್ಕಾಟಕ ಸಂಕ್ರಾಂತಿ ವೃತ್ತ b) ಕೋರಮಂಡಲ ತೀರ

c) ಕೋಸಿ ನದಿ d) ಪಂಪಸಾಗರ

*************************************************

# ಮೊದಲನೇ ಸಂಕಲನಾತ್ಮಕ ಮೌಲ್ಯಮಾಪನ (SA 1)

ತರಗತಿ: 10 2022-23 ವಿಷಯ: ಸಮಾಜ ವಿಜ್ಞಾನ

## ಸಾಮರ್ಥ್ಯಾನುಸಾರ ಅಂಕ ಹಂಚಿಕೆ

| ಕ್ರ.ಸಂ | ಸಾಮರ್ಥ್ಯ | ಅಂಕಗಳು | ಶೇಕಡವಾರು |
|---|---|---|---|
| 01 | ಜ್ಞಾನ | 13 | 16 |
| 02 | ತಿಳುವಳಿಕೆ | 40 | 50 |
| 03 | ಅನ್ವಯ | 22 | 28 |
| 04 | ಕೌಶಲ | 5 | 6 |

## ಕ್ಲಿಷ್ಟಾನುಸಾರ ಅಂಕ ಹಂಚಿಕೆ

| ಕ್ರ.ಸಂ | ಕ್ಲಿಷ್ಟತೆ | ಅಂಕಗಳು | ಶೇಕಡವಾರು |
|---|---|---|---|
| 01 | ಸುಲಭ | 24 | 30 |
| 02 | ಸಾಧಾರಣ | 40 | 50 |
| 03 | ಕಠಿಣ | 16 | 20 |

## ಪ್ರಶ್ನಾನುಸಾರ ಅಂಕ ಹಂಚಿಕೆ

| ಕ್ರ.ಸಂ | ಪ್ರಶ್ನೆಗಳ ಮಾದರಿಗಳು | ಪ್ರಶ್ನೆಗಳ ಸಂಖ್ಯೆ | ಅಂಕಗಳು |
|---|---|---|---|
| 01 | ಬಹು ಆಯ್ಕೆ ಪ್ರಶ್ನೆಗಳು | 08 | 08 |
| 02 | ಒಂದು ಅಂಕದಪ್ರಶ್ನೆಗಳು | 08 | 08 |
| 03 | ಎರಡು ಅಂಕದ ಪ್ರಶ್ನೆಗಳು | 08 | 16 |
| 04 | ಮೂರು ಅಂಕದ ಪ್ರಶ್ನೆಗಳು | 09 | 27 |
| 05 | ನಾಲ್ಕು ಅಂಕದ ಪ್ರಶ್ನೆಗಳು | 04 | 16 |
| 06 | ಐದು ಅಂಕದ ಪ್ರಶ್ನೆ | 01 | 05 |
| | ಒಟ್ಟು | 38 | 80 |

## ಪ್ರಶ್ನೆಗಳ ಸ್ವರೂಪವಾರು ಅಂಕ ಹಂಚಿಕೆ

| ಕ್ರ.ಸಂ | ವಿಷಯ | ಬ. ಆ | 1 ಅಂಕ | 2 ಅಂಕ | 3 ಅಂಕ | 4 ಅಂಕ | 5 ಅಂಕ | ಪ್ರಶ್ನೆಗಳು | ಅಂಕಗಳು |
|---|---|---|---|---|---|---|---|---|---|
| 01 | ಇತಿಹಾಸ | 2 | 2 | 2 | 3 | 2 | - | 11 | 25 |
| 02 | ರಾಜ್ಯಶಾಸ್ತ್ರ | 1 | 1 | 1 | 1 | 1 | - | 5 | 11 |
| 03 | ಸಮಾಜ ಶಾಸ್ತ್ರ | 2 | 1 | 1 | 1 | - | - | 5 | 08 |
| 04 | ಭೂಗೋಳ | 1 | 2 | 2 | 2 | 1 | 1 | 9 | 22 |
| 05 | ಅರ್ಥಶಾಸ್ತ್ರ | 1 | 1 | 1 | 1 | - | - | 4 | 07 |
| 06 | ವ್ಯವಹಾರ ಅಧ್ಯಯನ | 1 | 1 | 1 | 1 | - | - | 4 | 07 |
| | ಒಟ್ಟು | 08 | 08 | 08 | 09 | 04 | 1 | 38 | 80 |

| ಕ್ರ. ಸಂ | ಘಟಕದ ಹೆಸರು | ಜ್ಞಾನ | | | | | ತಿಳುವಳಿಕೆ | | | | | ಅನ್ವಯ | | | | | ಕೌಶಲ | | | | | | ಒಟ್ಟು ಪ್ರಶ್ನೆ ಗಳು | ಒಟ್ಟು ಅಂಕ ಗಳು |
|---|---|---|---|---|---|---|---|---|---|---|---|---|---|---|---|---|---|---|---|---|---|---|---|---|
| | | M | 1 | 2 | 3 | 4 | M | 1 | 2 | 3 | 4 | M | 1 | 2 | 3 | 4 | M | 1 | 2 | 3 | 4 | 5 | | |
| 1 | ಭಾರತಕ್ಕೆ ಯುರೋಪಿಯನ್ನರ ಆಗಮನ | | 1(1) | | | | | | | 3(1) | | | | | | | | | | | | | 2 | 4 |
| 2 | ಬ್ರಿಟೀಷ ಆಳ್ವಿಕೆಯ ವಿಸ್ತರಣೆ | 1(1) | | | | | | | | | | | | | 3(1) | | | | | | | | 2 | 4 |
| 3 | ಭಾರತದಲ್ಲಿ ಬ್ರಿಟಿಷ ಆಳ್ವಿಕೆಯ ಪರಿಣಾಮಗಳು | | | 2(1) | | | | | | | | 1(1) | | | | 4(1) | | | | | | | 3 | 7 |
| 4 | ಕರ್ನಾಟಕದಲ್ಲಿ ಬ್ರಿಟಿಷ ಆಳ್ವಿಕೆಗೆ ಪ್ರತಿರೋಧಗಳು ಮತ್ತು ಮೈಸೂರಿನ ಒಡೆಯರು | | | | | | | | 2(1) | 3(2) | 4(1) | | | | | | | | | | | | 2 | 5 |
| 5 | ಸಾಮಾಜಿಕ ಮತ್ತು ಧಾರ್ಮಿಕ ಸುಧಾರಣಾ ಚಳುವಳಿಗಳು | | | | | | | 1(1) | | | 4(1) | | | | | | | | | | | | 2 | 5 |
| 6 | ಭಾರತಕ್ಕಿರುವ ಸವಾಲುಗಳು ಮತ್ತು ಅವುಗಳ ಪರಿಹಾರೋಪಾಯಗಳು | | 1(1) | | | | | | | | 4(1) | | | | 3(1) | | | | | | | | 4 | 10 |
| 7 | ಅನ್ಯರಾಷ್ಟ್ರಗಳೊಂದಿಗೆ ಭಾರತದ ಸಂಬಂಧ | | | | | | 1(1) | | 2(1) | | | | | | | | | | | | | | 1 | 1 |
| 8 | ಸಾಮಾಜಿಕ ಸ್ತರವಿನ್ಯಾಸ | 1(1) | | | | | | | | 3(1) | | | | | | | | | | | | | 2 | 4 |
| 9 | ದುಡಿಮೆ ಮತ್ತು ಆರ್ಥಿಕ ಜೀವನ | 1(1) | | | | | | 1(1) | | | | | | 2(1) | | | | | | | | | 3 | 4 |
| 10 | ಭಾರತ: ಭೌಗೋಳಿಕ ಸ್ಥಾನ ಹಾಗೂ ಪ್ರಾಕೃತಿಕ ಲಕ್ಷಣಗಳು | | | 2(1) | | | | | | 3(1) | | | | | | | | | | | | 2* | 3 | 7 |
| 11 | ಭಾರತದ ಋತುಗಳು | | 1(1) | | | | | | | | | | | 2(1) | | | | | | | | | 2 | 3 |
| 12 | ಭಾರತದ ಮಣ್ಣುಗಳು | | | | | | | | | | | | | | 3(1) | | | | | | | 1* | 1 | 4 |
| 13 | ಭಾರತದ ಅರಣ್ಯಗಳು | 1(1) | | | | | | | | | | | | | 3(1) | | | | | | | | 1 | 1 |
| 14 | ಭಾರತದ ಜಲಸಂಪನ್ಮೂಲ | | 1(1) | | | | | | | | 4(1) | | | | | | | | | | | 2* | 2 | 7 |
| 15 | ಅರ್ಥ ವ್ಯವಸ್ಥೆ ಮತ್ತು ಸರಕಾರ | | | | | | 1(1) | 1(1) | | 3(1) | | | | 2(1) | | | | | | | | | 4 | 7 |
| 16 | ಬ್ಯಾಂಕ್ ವ್ಯವಹಾರಗಳು | 1(1) | | | | | | 1(1) | | 3(1) | | | | 2(1) | | | | | | | | | 4 | 7 |
| | ಒಟ್ಟು | 1(5) | 1(4) | 2(2) | | | 1(2) | 1(4) | 2(2) | 3(6) | 4(3) | 1(1) | | 2(4) | 3(3) | 4(1) | | | | | | 5(1) | 38 | 80 |

ಸೂಚನೆ : ಆವರಣದ ಹೊರಗಿನ ಸಂಖ್ಯೆಗಳು ಅಂಕಗಳನ್ನು ಹಾಗೂ ಆವರಣದ ಒಳಗಿನ ಅಂಕಿಗಳು ಪ್ರಶ್ನೆಗಳ ಸಂಖ್ಯೆಯನ್ನು ಸೂಚಿಸುತ್ತವೆ.

# ಮೊದಲನೇ ಸಂಕಲನಾತ್ಮಕ ಮೌಲ್ಯಮಾಪನ (SA 1)

## ಪ್ರಶ್ನೆ ಪತ್ರಿಕೆ ವಿಶ್ಲೇಷಣೆ

| ಪ್ರಶ್ನೆ ಸಂಖ್ಯೆ | ಘಟಕ | ಉದ್ದೇಶ | ನಿರೀಕ್ಷಿತ ಫಲ | ಪ್ರಶ್ನೆ ವಿಧ | ಅಂಕ | ಕಾಲ | ಪ್ರಶ್ನೆಯ ಕ್ಲಿಷ್ಟತೆ |
|---|---|---|---|---|---|---|---|
| 1 | ಬ್ರಿಟೀಷ ಆಳ್ವಿಕೆಯ ವಿಸ್ತರಣೆ | ಸ್ಮರಣೆ | ಹೆಸರಿಸುವರು | ಬಹುಆಯ್ಕೆ | 1 | 2 ನಿಮಿಷ | ಸುಲಭ |
| 2 | ಭಾರತದಲ್ಲಿ ಬ್ರಿಟಿಷ ಆಳ್ವಿಕೆಯ ಪರಿಣಾಮಗಳು | ಅನ್ವಯ | ವಿಶ್ಲೇಷಿಸುವರು | ಬಹುಆಯ್ಕೆ | 1 | 2 ನಿಮಿಷ | ಕಠಿಣ |
| 3 | ಅನ್ಯರಾಷ್ಟ್ರಗಳೊಂದಿಗೆ ಭಾರತದ ಸಂಬಂಧ | ತಿಳುವಳಿಕೆ | ಕಾರಣ ಕೊಡುವರು | ಬಹುಆಯ್ಕೆ | 1 | 2 ನಿಮಿಷ | ಸಾಧಾರಣ |
| 4 | ಸಾಮಾಜಿಕ ಸ್ತರವಿನ್ಯಾಸ | ಸ್ಮರಣೆ | ಹೆಸರಿಸುವರು | ಬಹುಆಯ್ಕೆ | 1 | 2 ನಿಮಿಷ | ಸುಲಭ |
| 5 | ದುಡಿಮೆ ಮತ್ತು ಆರ್ಥಿಕ ಜೀವನ | ಸ್ಮರಣೆ | ಸ್ಮರಿಸುವರು | ಬಹುಆಯ್ಕೆ | 1 | 2 ನಿಮಿಷ | ಸುಲಭ |
| 6 | ಭಾರತದ ಅರಣ್ಯಗಳು | ಸ್ಮರಣೆ | ಹೆಸರಿಸುವರು | ಬಹುಆಯ್ಕೆ | 1 | 2 ನಿಮಿಷ | ಸುಲಭ |
| 7 | ಅರ್ಥ ವ್ಯವಸ್ಥೆ ಮತ್ತು ಸರಕಾರ | ತಿಳುವಳಿಕೆ | ವಿವರಿಸುವರು | ಬಹುಆಯ್ಕೆ | 1 | 2 ನಿಮಿಷ | ಸಾಧಾರಣ |
| 8 | ಬ್ಯಾಂಕ್ ವ್ಯವಹಾರಗಳು | ಸ್ಮರಣೆ | ಹೆಸರಿಸುವರು | ಬಹುಆಯ್ಕೆ | 1 | 2 ನಿಮಿಷ | ಸುಲಭ |
| 9 | ಭಾರತಕ್ಕೆ ಯುರೋಪಿಯನ್ನರ ಆಗಮನ | ಸ್ಮರಣೆ | ಸ್ಮರಿಸುವರು | ಕಿರು ಉತ್ತರದ ಪ್ರಶ್ನೆ | 1 | 2 ನಿಮಿಷ | ಸಾಧಾರಣ |
| 10 | ಸಾಮಾಜಿಕ ಮತ್ತು ಧಾರ್ಮಿಕ ಸುಧಾರಣಾ ಚಳುವಳಿಗಳು | ತಿಳುವಳಿಕೆ | ಕಾರಣ ಕೊಡುವರು | ಕಿರು ಉತ್ತರದ ಪ್ರಶ್ನೆ | 1 | 2 ನಿಮಿಷ | ಸಾಧಾರಣ |
| 11 | ಭಾರತಕ್ಕಿರುವ ಸವಾಲುಗಳು ಮತ್ತು ಅವುಗಳ ಪರಿಹಾರೋಪಾಯಗಳು | ಸ್ಮರಣೆ | ಹೆಸರಿಸುವರು | ಕಿರು ಉತ್ತರದ ಪ್ರಶ್ನೆ | 1 | 2 ನಿಮಿಷ | ಸುಲಭ |
| 12 | ದುಡಿಮೆ ಮತ್ತು ಆರ್ಥಿಕ ಜೀವನ | ತಿಳುವಳಿಕೆ | ಅರ್ಥೈಸುವರು | ಕಿರು ಉತ್ತರದ ಪ್ರಶ್ನೆ | 1 | 2 ನಿಮಿಷ | ಸಾಧಾರಣ |
| 13 | ಭಾರತದ ಋತುಗಳು | ಸ್ಮರಣೆ | ಹೆಸರಿಸುವರು | ಕಿರು ಉತ್ತರದ ಪ್ರಶ್ನೆ | 1 | 2 ನಿಮಿಷ | ಸುಲಭ |
| 14 | ಭಾರತದ ಜಲಸಂಪನ್ಮೂಲ | ಸ್ಮರಣೆ | ಹೆಸರಿಸುವರು | ಕಿರು ಉತ್ತರದ ಪ್ರಶ್ನೆ | 1 | 2 ನಿಮಿಷ | ಸುಲಭ |
| 15 | ಅರ್ಥ ವ್ಯವಸ್ಥೆ ಮತ್ತು ಸರಕಾರ | ತಿಳುವಳಿಕೆ | ಕಾರಣ ಕೊಡುವರು | ಕಿರು ಉತ್ತರದ ಪ್ರಶ್ನೆ | 1 | 2 ನಿಮಿಷ | ಸಾಧಾರಣ |
| 16 | ಬ್ಯಾಂಕ್ ವ್ಯವಹಾರಗಳು | ತಿಳುವಳಿಕೆ | ಕಾರಣ ಕೊಡುವರು | ಕಿರು ಉತ್ತರದ ಪ್ರಶ್ನೆ | 1 | 2 ನಿಮಿಷ | ಸಾಧಾರಣ |
| 17 | ಭಾರತದಲ್ಲಿ ಬ್ರಿಟಿಷ ಆಳ್ವಿಕೆಯ ಪರಿಣಾಮಗಳು | ಸ್ಮರಣೆ | ಸ್ಮರಿಸುವರು | ಸಂಕ್ಷಿಪ್ತ ಉತ್ತರದ ಪ್ರಶ್ನೆ | 2 | 5 ನಿಮಿಷ | ಸುಲಭ |
| 18 | ಕರ್ನಾಟಕದಲ್ಲಿ ಬ್ರಿಟಿಷ ಆಳ್ವಿಕೆಗೆ ಪ್ರತಿರೋಧಗಳು ಮತ್ತು ಮೈಸೂರಿನ ಒಡೆಯರು | ತಿಳುವಳಿಕೆ | ವಿವರಿಸುವರು | ಸಂಕ್ಷಿಪ್ತ ಉತ್ತರದ ಪ್ರಶ್ನೆ | 2 | 5 ನಿಮಿಷ | ಸಾಧಾರಣ |
| 19 | ಅನ್ಯರಾಷ್ಟ್ರಗಳೊಂದಿಗೆ ಭಾರತದ ಸಂಬಂಧ | ತಿಳುವಳಿಕೆ | ವಿವರಿಸುವರು | ಸಂಕ್ಷಿಪ್ತ ಉತ್ತರದ ಪ್ರಶ್ನೆ | 2 | 5 ನಿಮಿಷ | ಸುಲಭ |
| 20 | ದುಡಿಮೆ ಮತ್ತು ಆರ್ಥಿಕ ಜೀವನ | ತಿಳುವಳಿಕೆ | ಕಾರಣ ಕೊಡುವರು | ಸಂಕ್ಷಿಪ್ತ ಉತ್ತರದ ಪ್ರಶ್ನೆ | 2 | 5 ನಿಮಿಷ | ಸುಲಭ |
| 21 | ಭಾರತ: ಭೌಗೋಳಿಕ ಸ್ಥಾನ ಹಾಗೂ ಪ್ರಾಕೃತಿಕ ಲಕ್ಷಣಗಳು | ಸ್ಮರಣೆ | ಹೆಸರಿಸುವರು | ಸಂಕ್ಷಿಪ್ತ ಉತ್ತರದ ಪ್ರಶ್ನೆ | 2 | 5 ನಿಮಿಷ | ಸುಲಭ |
| 22 | ಭಾರತದ ಋತುಗಳು | ಅನ್ವಯ | ಚರ್ಚಿಸುವರು | ಸಂಕ್ಷಿಪ್ತ ಉತ್ತರದ ಪ್ರಶ್ನೆ | 2 | 5 ನಿಮಿಷ | ಕಠಿಣ |
| 23 | ಅರ್ಥ ವ್ಯವಸ್ಥೆ ಮತ್ತು ಸರಕಾರ | ಅನ್ವಯ | ಪರಿಹಾರ ಸೂಚಿಸುವರು | ಸಂಕ್ಷಿಪ್ತ ಉತ್ತರದ ಪ್ರಶ್ನೆ | 2 | 5 ನಿಮಿಷ | ಕಠಿಣ |

| | | | | | | | |
|---|---|---|---|---|---|---|---|
| 24 | ಬ್ಯಾಂಕ್ ವ್ಯವಹಾರಗಳು | ಅನ್ವಯ | ಹೋಲಿಸಿ ವ್ಯತ್ಯಸಿಸುವರು | ಸಂಕ್ಷಿಪ್ತ ಉತ್ತರದ ಪ್ರಶ್ನೆ | 2 | 5 ನಿಮಿಷ | ಕಠಿಣ |
| 25 | ಭಾರತಕ್ಕೆ ಯುರೋಪಿಯನ್ನರ ಆಗಮನ<br>ಕರ್ನಾಟಕದಲ್ಲಿ ಬ್ರಿಟಿಷ ಆಳ್ವಿಕೆಗೆ ಪ್ರತಿರೋಧಗಳು ಮತ್ತು ಮೈಸೂರಿನ ಒಡೆಯರು | ತಿಳುವಳಿಕೆ | ವಿವರಿಸುವರು | ದೀರ್ಘಉತ್ತರದಪ್ರಶ್ನೆ–1 | 3 | 6 ನಿಮಿಷ | ಕಠಿಣ |
| 26 | ಬ್ರಿಟೀಷ ಆಳ್ವಿಕೆಯ ವಿಸ್ತರಣೆ | ಅನ್ವಯ | ವಿಶ್ಲೇಷಿಸುವರು | ದೀರ್ಘಉತ್ತರದಪ್ರಶ್ನೆ–1 | 3 | 6 ನಿಮಿಷ | ಕಠಿಣ |
| 27 | ಕರ್ನಾಟಕದಲ್ಲಿ ಬ್ರಿಟಿಷ ಆಳ್ವಿಕೆಗೆ ಪ್ರತಿರೋಧಗಳು ಮತ್ತು ಮೈಸೂರಿನ ಒಡೆಯರು | ತಿಳುವಳಿಕೆ | ವಿವರಿಸುವರು | ದೀರ್ಘಉತ್ತರದಪ್ರಶ್ನೆ–1 | 3 | 6 ನಿಮಿಷ | |
| 28 | ಭಾರತಕ್ಕಿರುವ ಸವಾಲುಗಳು ಮತ್ತು ಅವುಗಳ ಪರಿಹಾರೋಪಾಯಗಳು | ಅನ್ವಯ | ಸಮರ್ಥಿಸುವರು | ದೀರ್ಘಉತ್ತರದಪ್ರಶ್ನೆ–1 | 3 | 6 ನಿಮಿಷ | ಕಠಿಣ |
| 29 | ಸಾಮಾಜಿಕ ಸ್ತರವಿನ್ಯಾಸ | ತಿಳುವಳಿಕೆ | ವಿವರಿಸುವರು | ದೀರ್ಘಉತ್ತರದಪ್ರಶ್ನೆ–1 | 3 | 6 ನಿಮಿಷ | ಸಾಧಾರಣ |
| 30 | ಭಾರತ: ಭೌಗೋಳಿಕ ಸ್ಥಾನ ಹಾಗೂ ಪ್ರಾಕೃತಿಕ ಲಕ್ಷಣಗಳು | ತಿಳುವಳಿಕೆ | ವ್ಯತ್ಯಸಿಸುವರು | ದೀರ್ಘಉತ್ತರದಪ್ರಶ್ನೆ–1 | 3 | 6 ನಿಮಿಷ | ಸಾಧಾರಣ |
| 31 | ಭಾರತದ ಮಣ್ಣುಗಳು<br>ಭಾರತದ ಅರಣ್ಯಗಳು | ಅನ್ವಯ | ವಿಶ್ಲೇಷಿಸುವರು | ದೀರ್ಘಉತ್ತರದಪ್ರಶ್ನೆ–1 | 3 | 6 ನಿಮಿಷ | ಸುಲಭ |
| 32 | ಅರ್ಥ ವ್ಯವಸ್ಥೆ ಮತ್ತು ಸರಕಾರ | ತಿಳುವಳಿಕೆ | ವಿವರಿಸುವರು | ದೀರ್ಘಉತ್ತರದಪ್ರಶ್ನೆ–1 | 3 | 6 ನಿಮಿಷ | ಸುಲಭ |
| 33 | ಬ್ಯಾಂಕ್ ವ್ಯವಹಾರಗಳು | ತಿಳುವಳಿಕೆ | ವಿವರಿಸುವರು | ದೀರ್ಘಉತ್ತರದಪ್ರಶ್ನೆ–1 | 3 | 6 ನಿಮಿಷ | ಸುಲಭ |
| 34 | ಭಾರತದಲ್ಲಿ ಬ್ರಿಟಿಷ ಆಳ್ವಿಕೆಯ ಪರಿಣಾಮಗಳು | ಅನ್ವಯ | ವಿಶ್ಲೇಷಿಸುವರು | ದೀರ್ಘಉತ್ತರದಪ್ರಶ್ನೆ–2 | 4 | 11ನಿಮಿಷ | ಕಠಿಣ |
| 35 | ಕರ್ನಾಟಕದಲ್ಲಿ ಬ್ರಿಟಿಷ ಆಳ್ವಿಕೆಗೆ ಪ್ರತಿರೋಧಗಳು ಮತ್ತು ಮೈಸೂರಿನ ಒಡೆಯರು<br>ಸಾಮಾಜಿಕ ಮತ್ತು ಧಾರ್ಮಿಕ ಸುಧಾರಣಾ ಚಳುವಳಿಗಳು | ತಿಳುವಳಿಕೆ | ವಿವರಿಸುವರು<br>ಕಾರಣ ಕೊಡುವರು | ದೀರ್ಘಉತ್ತರದಪ್ರಶ್ನೆ–2 | 4 | 11ನಿಮಿಷ | ಸಾಧಾರಣ |
| 36 | ಭಾರತಕ್ಕಿರುವ ಸವಾಲುಗಳು ಮತ್ತು ಅವುಗಳ ಪರಿಹಾರೋಪಾಯಗಳು | ತಿಳುವಳಿಕೆ | ವಿವರಿಸುವರು | ದೀರ್ಘಉತ್ತರದಪ್ರಶ್ನೆ–2 | 4 | 11ನಿಮಿಷ | ಸಾಧಾರಣ |
| 37 | ಭಾರತದ ಜಲಸಂಪನ್ಮೂಲ | ತಿಳುವಳಿಕೆ | ಕಾರಣ ಕೊಡುವರು | ದೀರ್ಘಉತ್ತರದಪ್ರಶ್ನೆ–2 | 4 | 11ನಿಮಿಷ | ಸಾಧಾರಣ |
| 38 | ಭಾರತ: ಭೌಗೋಳಿಕ ಸ್ಥಾನ ಹಾಗೂ ಪ್ರಾಕೃತಿಕ ಲಕ್ಷಣಗಳು<br>ಭಾರತದ ಮಣ್ಣುಗಳು<br>ಭಾರತದ ಜಲಸಂಪನ್ಮೂಲ | ಕೌಶಲ | ನಕ್ಷೆ ಬಿಡಿಸುವರು<br>ಗುರುತಿಸುವರು | ನಕ್ಷಾ ಪ್ರಶ್ನೆ | 5 | 10ನಿಮಿಷ | ಸುಲಭ |
| | ಒಟ್ಟು | | | | 80 | 180ನಿ | |

# ಮೊದಲನೇ ಸಂಕಲನಾತ್ಮಕ ಮೌಲ್ಯಮಾಪನ (SA 1)

ತರಗತಿ: 10ನೇ ತರಗತಿ 2022–23 ವಿಷಯ: ಸಮಾಜ ವಿಜ್ಞಾನ

## ಮಾದರಿ ಉತ್ತರಗಳು

**I.**

1. C). ಹೈದರಾಬಾದ್
2. D). ಆಲೋಚನಾ ಕ್ರಮದಲ್ಲಿ ನಾವಿನ್ಯತೆ ತಂದವು.
3. C). ಟಿಬೆಟ್ ವಿವಾದ ಉಲ್ಬಣಗೊಂಡಿದ್ದು
4. B). ಆದಿಕವಿ ಪಂಪ
5. B). 1976
6. C). ಎಲೆ ಉದುರಿಸುವ ಮಾನ್ಸೂನ್ ಅರಣ್ಯಗಳು
7. A). ಶೀಘ್ರ ಆರ್ಥಿಕ ಅಭಿವೃದ್ಧಿ
8. D). ಚಾಲ್ತಿ ಖಾತೆ

**II.**

9. ಇಟಲಿಯ ವರ್ತಕರು
10. ರಾಮಕೃಷ್ಣ ಪರಮಹಂಸರ ಧ್ಯೇಯಾದರ್ಶಗಳನ್ನು ಪ್ರಚಾರ ಪಡಿಸಲು
11. ಲೋಕಾಯುಕ್ತ
12. ಯಾವುದಾದರೂ ನಿರ್ಧಿಷ್ಟ ಕ್ಷೇತ್ರವೊಂದರಲ್ಲಿ ಸಾಕಷ್ಟು ಆಳವಾದ ಪರಿಣಿತಿ, ತರಬೇತಿ ಅಥವಾ ಕೌಶಲ್ಯ ಪಡೆಯುವುದು ಎಂದರ್ಥ.
13. ರೂಬ್ಲಿ
14. ಹಿರಾಕುಡ್
15. ಕೃಷಿಯಲ್ಲಿ ಸುಧಾರಿತ ತಂತ್ರಜ್ಞಾನವನ್ನು ಪರಿಚಯಿಸಿದ್ದರಿಂದ
16. **ಭಾರತದ ಎಲ್ಲಾ ಬ್ಯಾಂಕುಗಳ ಕಾರ್ಯ ಚಟುವಟಿಕೆಗಳನ್ನು ನಿಯಂತ್ರಿಸುವುದರಿಂದ**

**III.**

**17.**

- ❖ ಕೇಂದ್ರದಲ್ಲಿ ದ್ವಿಸದನ ಶಾಸಕಾಂಗ ರಚನೆಗೆ ಅವಕಾಶ
- ❖ ಪ್ರಾಂತ್ಯಗಳಲ್ಲಿ ದ್ವಿಸರಕಾರ ಪದ್ಧತಿಗೆ ಅವಕಾಶ
- ❖ ಭಾರತಕ್ಕೆ ಒಬ್ಬ ಹೈಕಮೀಷನರ್ ನೇಮಕ
- ❖ ಸ್ವಯಂ ಆಡಳಿತವುಳ್ಳ ಸ್ಥಳೀಯ ಸಂಸ್ಥೆಗಳ ಅಭಿವೃದ್ಧಿ
- ❖ ಕೇಂದ್ರದ ಬಜೆಟ್ ನಿಂದ ಪ್ರಾಂತ್ಯಗಳ ಬಜೆಟ್ ಪ್ರತ್ಯೇಕ
- ❖ ಪ್ರತ್ಯೇಕ ಚುನಾವಣಾ ಮತಗಟ್ಟೆ ವ್ಯವಸ್ಥೆಯನ್ನು ಮುಸ್ಲಿಂ, ಸಿಖ್, ಆಂಗ್ಲೋ ಭಾರತೀಯರು ಮತ್ತು ಯುರೋಪಿಯನ್ನರಿಗೆ ವಿಸ್ತರಣೆ

**18.**

- ❖ 1799ರಲ್ಲಿ ಟಿಪ್ಪುವಿನ ಮರಣದ ನಂತರ ಮೈಸೂರು ರಾಜ್ಯ ಬ್ರಿಟಿಷರ ವಶವಾಯಿತು.
- ❖ ಬ್ರಿಟಿಷರು ಟಿಪ್ಪುವಿನ ಹತೋಟಿಯಲ್ಲಿದ್ದ ಭೌಗೋಳಿಕ ಪ್ರದೇಶಗಳನ್ನು ಮರಾಠರು ಮತ್ತು ನಿಜಾಮನೊಂದಿಗೆ ಹಂಚಿಕೊಂಡರು.

**19.**

- ❖ ಕಾಶ್ಮೀರ್ ಸಮಸ್ಯೆ
- ❖ ಭಯೋತ್ಪಾದನೆ
- ❖ ಪಾಕಿಸ್ತಾನದ ಮಿಲಿಟರಿಶಾಹಿತ್ವ
- ❖ ಭಾರತ ಮತ್ತು ಪಾಕಿಸ್ತಾನ ಯುದ್ಧಗಳು

ಅಥವಾ

- ❖ ಭಾರತ ಮತ್ತು ರಷ್ಯಾ ಉತ್ತಮ ಸಂಬಂಧ ಹೊಂದಿವೆ
- ❖ ಗೋವಾ ವಿಮೋಚನೆ ವೇಲೆ ರಷ್ಯಾ ಭಾರತಕ್ಕೆ ಸಹಕರಿಸಿತು.
- ❖ 1971ರಲ್ಲಿ 20 ವರ್ಷಗಳ ಶಾಂತಿ, ಮೈತ್ರಿ ಮತ್ತು ಸಹಕಾರ ಒಪ್ಪಂದಕ್ಕೆ ಸಹಿ ಹಾಕಿದವು.
- ❖ ಚೀನಾ ಆಕ್ರಮಣವನ್ನು ರಷ್ಯಾ ಖಂಡಿಸಿತು.
- ❖ ಭಿಲಾಯ್ ಮತ್ತು ಭೋಕಾರೋ ಉಕ್ಕಿನ ಕಾರ್ಖಾನೆಗಳ ಸ್ಥಾಪನೆಗೆ ಸಹಕಾರ ನೀಡಿದೆ.

**20.**

- ❖ ಅತಿಯಾದ ಜನಸಂಖ್ಯೆ
- ❖ ಯಾಂತ್ರಿಕರಣ
- ❖ ಅತಿಯಾದ ಶ್ರಮವಿಭಜನೆ
- ❖ ಸಾಮಾಜಿಕ ಅಸಮಾನತೆ
- ❖ ಅನಕ್ಷರತೆ

**ಅಥವಾ**

- ❖ ಕಾನೂನಿನ ನಿಯಂತ್ರಣವಿಲ್ಲ.
- ❖ ಉದ್ಯೋಗದ ಭದ್ರತೆ ಇರುವುದಿಲ್ಲ.
- ❖ ನಿಗದಿತ ವೇತನ ಮತ್ತು ವಿಶೇಷ ಭತ್ಯೆಗಳಿರುವುದಿಲ್ಲ.
- ❖ ಸಾಮಾಜಿಕ ಭದ್ರತೆ ಇರುವುದಿಲ್ಲ.
- ❖ ವಿಶ್ರಾಂತಿ ಮತ್ತು ವೈದ್ಯಕೀಯ ಸೌಲಭ್ಯಗಳಿರುವುದಿಲ್ಲ.
- ❖ ಮಾಲೀಕರು ನಿರಂತರ ದೌರ್ಜನ್ಯ.

**21.**

- ❖ ಉತ್ತರದ ಪರ್ವತಗಳು
- ❖ ಉತ್ತರದ ಮಹಾ ಮೈದಾನ
- ❖ ಪರ್ಯಾಯ ಪ್ರಸ್ಥಭೂಮಿ
- ❖ ಕರಾವಳಿ ಮೈದಾನಗಳು

**22.**

- ❖ ಭಾರತದ ಜನರ ಪ್ರಧಾನ ಉದ್ಯೋಗ ವ್ಯವಸಾಯವಾಗಿದೆ.
- ❖ ಮಾನ್ಸೂನ್ ಮಾರುತಗಳು ನಮ್ಮ ದೇಶದ ವ್ಯವಸಾಯವನ್ನು ನಿಯಂತ್ರಿಸುತ್ತವೆ.
- ❖ ಈ ಮಳೆ ವಿಫಲವಾದರೆ ಬರಗಾಲ ಬರುವುದು.
- ❖ ಮಳೆ ಹೆಚ್ಚಾದರೆ ಪ್ರವಾಹ ಉಂಟಾಗಿ ಅಪಾರ ಹಾನಿ ಉಂಟು ಮಾಡುವುದು.

**23.**

- ಸಾವಯವ ಕೃಷಿ ವಿಧಾನ ಬಳಸಲು ಪ್ರೋತ್ಸಾಹ
- ಜೈವಿಕ ಗೊಬ್ಬರ ಮತ್ತು ಜೈವಿಕ ಕ್ರಿಮಿನಾಶಕಗಳ ಬಳಕೆಗೆ ಪ್ರೋತ್ಸಾಹ
- ಕೃಷಿಯಲ್ಲಿ ಪರಿಸರ ತಂತ್ರಗಳ ಬಳಕೆಗೆ ಪ್ರೋತ್ಸಾಹ
- ಸುಸ್ಥಿರ ಕೃಷಿ ವಿಧಾನಗಳ ಬಳಕೆಗೆ ಪ್ರೋತ್ಸಾಹ

**24.**

**ಉಳಿತಾಯ ಖಾತೆ**

- ವೇತನ ಪಡೆಯುವವರು/ನಿಯಮಿತ ಆದಾಯ ಹೊಂದಿರುವ ಜನರು ಈ ಖಾತೆಯನ್ನು ತೆರೆಯುತ್ತಾರೆ.
- ಚೆಕ್ಕು ಪುಸ್ತಕ/ಹಣ ಹಿಂದಕ್ಕೆ ಪಡೆಯುವ ಚೀಟಿಯ ಮೂಲಕ ಹಣವನ್ನು ಹಿಂಪಡೆಯಲು ಸಾಧ್ಯವಿದೆ.
- ಈ ಠೇವಣಿಗಳಿಗೆ ಬಡ್ಡಿಯನ್ನು ನೀಡಲಾಗುತ್ತದೆ

**ಚಾಲ್ತಿ ಖಾತೆ**

- ವ್ಯಾಪಾರಸ್ಥರು, ವಾಣಿಜ್ಯ & ಔದ್ಯೋಗಿಕ ಸಂಸ್ಥೆಗಳು ಈ ಖಾತೆಯನ್ನು ತೆರೆಯುತ್ತಾರೆ.
- ಮರು ಪಾವತಿ, ಬೇಡಿಕೆ ಠೇವಣಿಗಳು & ಉಪಸರ್ಗ ವ್ಯವಹಾರಗಳ ಮೂಲಕ ಹಣವನ್ನು ಹಿಂಪಡೆಯಲು ಸಾಧ್ಯವಿದೆ.
- ಈ ಠೇವಣಿಗಳಿಗೆ ಬಡ್ಡಿಯನ್ನು ನೀಡುವುದಿಲ್ಲ.

# IV.

**25.**

**ಕಾರಣಗಳು**

- ದಸ್ತಕ್‌ಗಳ ದುರುಪಯೋಗ
- ಅನುಮತಿ ಇಲ್ಲದೆ ಕೋಟೆಯ ದುರಸ್ಥಿ
- ಕಪ್ಪುಕೋಣೆ ದುರಂತ

**ಪರಿಣಾಮಗಳು**

- ಭಾರತೀಯರಲ್ಲಿದ್ದ ಅನೈಕ್ಯತೆ, ಅಸಂಘಟನೆ ಮತ್ತು ಲೋಭಿತನವನ್ನು ಪ್ರದರ್ಶಿಸಿತು.
- ಮೀರ್ ಜಾಫರ್ ಬಂಗಾಳದ ನವಾಬನಾದನು.
- ಕಂಪನಿಯು ಬಂಗಾಳ ಪ್ರಾಂತ್ಯದಲ್ಲಿ ವ್ಯಾಪಾರದ ಅನಿರ್ಬಂಧಿತ ಹಕ್ಕನ್ನು ಪಡೆಯಿತು.
- ಮೀರ್ ಜಾಫರನು ಕಂಪನಿಗೆ ಹದಿನೇಳು ಕೋಟಿ ಎಪ್ಪತ್ತು ಲಕ್ಷ ರೂಪಾಯಿಗಳನ್ನು ನೀಡಿದನು.

ಅಥವಾ

- ಶಿವಾಜಿ ಸೇನೆಯನ್ನು ಮಧುರೆ, ಇಕ್ಕೇರಿ, ಬಿಜಾಪುರಗಳಲ್ಲಿ ಹಿಮ್ಮೆಟ್ಟಿಸಿದರು.
- ಮಾಗಡಿ, ಮಧುಗಿರಿ ಮೊದಲಾದ ಪ್ರಾಂತ್ಯಗಳ ವಶ.
- ಮೊಗಲ್ ಸೇನಾನಿಯಿಂದ ಬೆಂಗಳೂರು ವಶ.
- ಸಚಿವ ಸಂಪುಟ(ಅಠಾರ ಕಛೇರಿ)ವನ್ನು ಸ್ಥಾಪನೆ
- ಅಂಚೆ ವ್ಯವಸ್ಥೆ ಜಾರಿ
- ಕಾವೇರಿ ನದಿಗೆ ಎರಡು ಕಾಲುವೆಗಳ ನಿರ್ಮಾಣ
- ಅನೇಕ ಕವಿಗಳಿಗೆ ಮತ್ತು ಪಂಡಿತರಿಗೆ ಆಶ್ರಯ
- ಕರ್ನಾಟಕ ಕವಿಚಕ್ರವರ್ತಿ, ಅಪ್ರತಿಮ ವೀರ, ತೆಂಕಣರಾಜ ನವಕೋಟಿ ನಾರಾಯಣ ಎಂಬ ಬಿರುದುಗಳು

**26.**

- ಬ್ರಿಟಿಷ್ ಸೈನಿಕ ತುಕಡಿಯನ್ನು ತನ್ನ ರಾಜ್ಯದಲ್ಲಿ ಇರಿಸಿಕೊಳ್ಳಬೇಕು.
- ಸೇನೆಯ ವೆಚ್ಚವನ್ನು ರಾಜ್ಯವೇ ಭರಿಸಬೇಕು. ಇಲ್ಲವೆ ನಿರ್ದಿಷ್ಟ ಕಂದಾಯ ಪ್ರದೇಶವನ್ನು ಬಿಟ್ಟುಕೊಡಬೇಕು.
- ರಾಜನ ಆಸ್ಥಾನದಲ್ಲಿ ಬ್ರಿಟಿಷ್ ರೆಸಿಡೆಂಟನನ್ನು ನೇಮಿಸಿಕೊಳ್ಳಬೇಕು.
- ಬ್ರಿಟಿಷರ ಅನುಮತಿ ಇಲ್ಲದೆ ಆಸ್ಥಾನದಲ್ಲಿ ಯಾವುದೇ ಯುರೋಪಿಯನ್ನರನ್ನು ನೇಮಿಸಿಕೊಳ್ಳುವಂತಿಲ್ಲ.
- ಯುದ್ಧ ಅಥವಾ ಸಂಧಾನ ಮಾಡಿಕೊಳ್ಳಬೇಕಾದರೆ ಗವರ್ನರ್ ಜನರಲ್‌ನ ಸಮ್ಮತಿ ಬೇಕು.
- ಕಂಪನಿಯು ರಾಜ್ಯಕ್ಕೆ ಆಂತರಿಕ ಮತ್ತು ಬಾಹ್ಯ ರಕ್ಷಣೆಯನ್ನು ಒದಗಿಸುವುದು.

**27.**

- ಕಿತ್ತೂರಿನ ಚೆನ್ನಮ್ಮನೊಂದಿಗೆ ಸಂಗೊಳ್ಳಿಯ ರಾಯಣ್ಣನ ಹೆಸರು ಅಜರಾಮರ ಮತ್ತು ಆದರ್ಶಪ್ರಾಯವೆನಿಸಿದೆ.
- ರಾಯಣ್ಣ ವೀರಯೋಧ. ಕಿತ್ತೂರಿನ ಸ್ವಾತಂತ್ರ್ಯಕ್ಕಾಗಿ ಹೋರಾಡುವುದು ತನ್ನ ಆದ್ಯ ಕರ್ತವ್ಯವೆಂದು ಭಾವಿಸಿದ್ದನು.
- ರಾಯಣ್ಣ ಕಿತ್ತೂರಿನ ಯುದ್ಧದಲ್ಲಿ ಚೆನ್ನಮ್ಮನ ಜೊತೆಯಲ್ಲಿ ಬ್ರಿಟಿಷರ ವಿರುದ್ಧ ಹೋರಾಡಿದ್ದನು.
- ಯುದ್ಧದಲ್ಲಿ ಸೆರೆಯಾಳಾಗಿ ಬಂಧಿಸಲ್ಪಟ್ಟು ತರುವಾಯ ಬಿಡುಗಡೆಗೊಂಡನು.
- ಭೌಗೋಳಿಕವಾಗಿ ಆಯಕಟ್ಟಿನ ಸ್ಥಳಗಳಲ್ಲಿ ಗುಪ್ತ ಸಭೆಗಳನ್ನು ನಡೆಸುವ ಮೂಲಕ ತನ್ನ ಮುಂದಿನ ಯೋಜನೆಗಳನ್ನು
- ರೂಪಿಸಿಕೊಂಡನು.
- ಬ್ರಿಟಿಷರ ಆಡಳಿತ ಯಂತ್ರದ ಪ್ರಮುಖ ಅಂಗವಾಗಿದ್ದ ತಾಲ್ಲೂಕು ಕಛೇರಿಗಳು ಮತ್ತು ಖಜಾನೆಗಳನ್ನು ಲೂಟಿ ಮಾಡುವುದು.
- ನಂದಗಡ ಮತ್ತು ಖಾನಾಪುರ ತರುವಾಯ ಸಂಪಗಾವಿ ಆತನ ಕಾರ್ಯಾಚರಣೆಗಳ ಸ್ಥಳಗಳಾದವು.
- ಸಂಚಿಗೆ ಬಲಿಯಾದ ರಾಯಣ್ಣನನ್ನು ಇಂಗ್ಲಿಷ್ ಸೈನ್ಯ ಬಂಧಿಸಿ ಧಾರವಾಡಕ್ಕೆ ತಂದಿತು.
- ಮುಖ್ಯ ಅಪರಾಧಿ ಎಂದು ಘೋಷಿಸಿ ನಂದಗಡದಲ್ಲಿ ಅವನನ್ನು ಗಲ್ಲಿಗೇರಿಸಲಾಯಿತು.
- 

**28.**

- ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯ ರಚನೆ
- ಬಾಲ್ಯ ವಿವಾಹ ನಿಷೇಧ ಕಾಯ್ದೆ ಅನುಷ್ಠಾನ
- ವರದಕ್ಷಿಣೆ ನಿಷೇಧ ಕಾಯ್ದೆಯ ಅನುಷ್ಠಾನ
- ಸರ್ಕಾರಿ ಉದ್ಯೋಗದಲ್ಲಿ ನಿಗದಿತ ಪ್ರಮಾಣದ ಮೀಸಲಾತಿ
- ಸ್ಥಳೀಯ ಸಂಸ್ಥೆಗಳಲ್ಲಿ ಶೇ.33ರಷ್ಟು ಮೀಸಲಾತಿ
- ಮಹಿಳಾ ಶಿಕ್ಷಣಕ್ಕೆ ಆದ್ಯತೆ

- ಮಹಿಳಾ ಆಯೋಗಗಳ ರಚನೆ
- 'ಸ್ತ್ರೀ ಶಕ್ತಿ' ಕಾರ್ಯಕ್ರಮ ಅನುಷ್ಠಾನ
- ಸ್ವ ಉದ್ಯೋಗಕ್ಕಾಗಿ ಸಾಲ ಮತ್ತು ಸಬ್ಸಿಡಿ.
- ಮಹಿಳಾಮಂಡಲ, ಯುವತಿಮಂಡಲಗಳ ಸ್ಥಾಪನೆ

**29.**

- ಸಂವಿಧಾನದ 17ನೆಯ ವಿಧಿಯು ಅಸ್ಪೃಶ್ಯತಾ ಆಚರಣೆಯನ್ನು ನಿಷೇಧಿಸಿದೆ.
- ಭಾರತ ಸರ್ಕಾರ ಅಸ್ಪೃಶ್ಯತಾ ಅಪರಾಧಗಳ ಕಾಯ್ದೆಯನ್ನು 1955ರಲ್ಲಿ ಜಾರಿಗೊಳಿಸಿದೆ.
- 'ನಾಗರಿಕ ಹಕ್ಕುಗಳ ಸಂರಕ್ಷಣಾ ಕಾಯ್ದೆ' ಎಂದು 1976ರಲ್ಲಿಮಾರ್ಪಾಡುಗೊಳಿಸಲಾಯಿತು.
- ಸಾರ್ವತ್ರಿಕ ಮತದಾನದ ಹಕ್ಕನ್ನು ನೀಡಲಾಗಿದೆ
- ಸಮಾನತೆಯ ಹಕ್ಕನ್ನು ನೀಡಲಾಗಿದೆ
- ಶೈಕ್ಷಣಿಕ, ರಾಜಕೀಯ, ಆರ್ಥಿಕ ಮತ್ತು ಉದ್ಯೋಗಾವಕಾಶಗಳಲ್ಲಿ ಮೀಸಲಾತಿಗಳನ್ನು ಕಲ್ಪಿಸಲಾಗಿದೆ.
- 1989ರ ಶಾಸನವು ಅಸ್ಪೃಶ್ಯತೆಯ ನಿರ್ಮೂಲನೆ ಕುರಿತಾದ ವಿಶೇಷ ಜವಾಬ್ದಾರಿಗಳನ್ನುರಾಜ್ಯ ಸರ್ಕಾರಗಳಿಗೆ ವಹಿಸಿದೆ.

**30.**

**ಪೂರ್ವ ಘಟ್ಟಗಳು**

- ಪರ್ಯಾಯ ಪ್ರಸ್ಥಭೂಮಿಯ ಪೂರ್ವದಲ್ಲಿವೆ.
- ಹೆಚ್ಚು ಎತ್ತರವಾಗಿಲ್ಲ.
- ನಿರಂತರವಾಗಿಲ್ಲ.
- ನದಿ ಕಣಿವೆಗಳಿಂದ ಅಲ್ಲಲ್ಲಿ ಪ್ರತ್ಯೇಕಿಸಲ್ಪಟ್ಟಿವೆ.

**ಪಶ್ಚಿಮ ಘಟ್ಟಗಳು**

- ಪರ್ಯಾಯ ಪ್ರಸ್ಥಭೂಮಿಯ ಪಶ್ಚಿಮದಲ್ಲಿವೆ.
- ಹೆಚ್ಚು ಎತ್ತರವಾಗಿವೆ.
- ನಿರಂತರವಾಗಿವೆ.

**31.**

- ಇಳಿಜಾರಿಗೆ ಅಡ್ಡಲಾಗಿ ಉಳುಮೆ ಮಾಡುವುದು.
- ಅಡ್ಡ ಬದುಗಳನ್ನು ನಿರ್ಮಿಸುವುದು.
- ಹಂತಹಂತವಾಗಿ ವ್ಯವಸಾಯ ಕ್ಷೇತ್ರಗಳ ನಿರ್ಮಾಣ
- ಅರಣ್ಯ ನಾಶವನ್ನು ತಟಡೆಗಟ್ಟುವುದು.
- ಅತಿಯಾಗಿ ಮೇಯಿಸುವುದನ್ನು ನಿಯಂತ್ರಿಸುವುದು.
- ನೀರಿನ ಯೋಜಿತ ಬಳಕೆ
- ಚೆಕ್ ಡ್ಯಾಮ್ ಗಳ ನಿರ್ಮಾಣ

**ಅಥವಾ**

- ಕಾಡ್ಗಿಚ್ಚು ಉಂಟುಮಾಡುವ ಘರ್ಷಿತ ಮರಗಳನ್ನು ತೆಗೆಯುವುದು.
- ಅರಣ್ಯದ ಮರಗಳಿಗೆ ತಗಲುವ ರೋಗಗಳನ್ನು ನಿಯಂತ್ರಿಸುವುದು.
- ಸಸಿಗಳನ್ನು ನೆಡುವುದು, ಬೀಜಗಳನ್ನು ಹರಡುವುದು.
- ಕಾನೂನು ಬಾಹಿರವಾಗಿ ಮರ ಕಡಿಯುವದನ್ನು ನಿಯಂತ್ರಿಸುವುದು.
- ಅರಣ್ಯಗಳಲ್ಲಿ ಸಾಕು ಪ್ರಾಣಿಗಳ ಮೇಯಿಸುವಿಕೆಯನ್ನು ನಿಯಂತ್ರಿಸುವುದು.
- ಸಾರ್ವಜನಿಕರನ್ನು ಮರ ನೆಡಲು ಪ್ರೋತ್ಸಾಹಿಸುವುದು ಮತ್ತು ಅವುಗಳ ಪ್ರಾಮುಖ್ಯತೆಯ ಬಗ್ಗೆ ತಿಳುವಳಿಕೆ ನೀಡಿ ರಕ್ಷಣೆಗೆ ಪ್ರೇರೇಪಿಸುವುದು.
- ಸಾಮಾಜಿಕ ಅರಣ್ಯ ಯೋಜನೆಯನ್ನು ತ್ವರಿತವಾಗಿ ಯಶಸ್ವಿಯಾಗಿ ಕಾರ್ಯಗತಗೊಳಿಸುವುದು.

**32.**

- ಬಡತನ ನಿರ್ಮೂಲನೆ
- ಉತ್ಪಾದನೆಯನ್ನು ಗರಿಷ್ಠ ಮಟ್ಟಕ್ಕೆ ಹೆಚ್ಚಿಸುವುದು.
- ಉದ್ಯೋಗಾವಕಾಶಗಳನ್ನು ಹೆಚ್ಚಿಸುವುದು.
- ಆರ್ಥಿಕ ಅಸಮಾನತೆಯನ್ನು ಕಡಿಮೆ ಮಾಡುವುದು.
- ಆರ್ಥಿಕ ಸ್ಥಿರತೆಯನ್ನು ಕಾಯ್ದುಕೊಳ್ಳುವುದು.
- ಆರ್ಥಿಕತೆಯನ್ನು ಆಧುನೀಕರಣಗೊಳಿಸುವುದು.

**ಅಥವಾ**

- ರಾಷ್ಟ್ರೀಯ ಆದಾಯ ಮತ್ತು ತಲಾ ಆದಾಯಗಳ ಹೆಚ್ಚಳ
- ಆಹಾರ ಧಾನ್ಯಗಳ ಉತ್ಪಾದನೆಯಲ್ಲಿ ಸ್ವಾವಲಂಬನೆ
- ಉದ್ಯೋಗಾವಕಾಶಗಳ ಹೆಚ್ಚಳ
- ಎಲ್ಲ ವಲಯಗಳಲ್ಲಿ ಆಧುನಿಕ ತಂತ್ರಜ್ಞಾನದ ಬಳಕೆ
- ನಮ್ಮ ತಂತ್ರಜ್ಞರ ಸೇವೆಯ ರಫ್ತು
- ಸರಕುಗಳ ರಫ್ತು ಪ್ರಮಾಣದ ಹೆಚ್ಚಳ
- ಸಾಕ್ಷರತಾ ಪ್ರಮಾಣದ ಹೆಚ್ಚಳ
- ಜನನ ಮತ್ತು ಮರಣ ದರಗಳೆರಡು ಕಡಿಮೆಯಾಗಿರುವುದು

**33.**

- **ಜಮಾ ಕಾರ್ಡು ಗಳನ್ನು ಕೊಡುವುದು.**
- **ಖಾಸಗಿ ಸಾಲಗಳು.**
- **ಮನೆ ಕಟ್ಟಲು ಅಥವಾ ವಾಹನ ಖರೀದಿಸಲು ಸಾಲ ಕೊಡುವುದು.**
- **ಪರಸ್ಪರ ನಿಧಿಗಳನ್ನು ನಿರ್ವಹಿಸುವುದು**
- **ವ್ಯಾಪಾರಕ್ಕೆ ಬೇಕಾದ ಸಾಲಗಳು.**
- **ಭದ್ರತಾ ಅಥವಾ ರಕ್ಷಣಾ ಕಪಾಟುಗಳನ್ನು ಕೊಡುವುದು.**
- **ಡೆಬಿಟ್ ಕಾರ್ಡ್**
- **ಭರವಸೆ ಸೇವೆಗಳು**
- **ಸಹಿಗಳಿಗೆ ಜವಾಬ್ದಾರಿ ಹಾಕುವುದು.**

ಅಥವಾ

- ರಾಷ್ಟ್ರೀಯ ಉಳಿತಾಯ ಪತ್ರಗಳು
- ಅಂಚೆ ಉಳಿತಾಯ ಖಾತೆಗಳು
- ಕಿಸಾನ್ ವಿಕಾಸ ಪತ್ರಗಳು
- ಮಹೆಯಾನ ತೀರು ಠೇವಣಿಗಳು
- ಅಂಚೆ ವಿಮೆ
- ನಿವೃತ್ತಿವೇತನ
- ಹಣವನ್ನು ವರ್ಗಾಯಿಸುವುದು ಮುಂತಾದ ಅನೇಕ ಹಣಕಾಸಿನ ವ್ಯವಹಾರಗಳನ್ನು ಕೈಗೊಂಡಿದೆ.

## V.

### 34.

| ಖಾಯಂ ಜಮೀನ್ದಾರಿಪದ್ಧತಿ | ರೈತವಾರಿ ಪದ್ಧತಿ |
|---|---|
| ಕಾರ್ನ್‌ವಾಲೀಸ್ ಜಾರಿಗೆ ತಂದನು | ಅಲೆಕ್ಸಾಂಡರ್ ರೀಡ್ ಮತ್ತು ಮನ್ರೋ ಜಾರಿಗೆ ತಂದರು |
| ಬಂಗಾಳ ಮತ್ತು ಬಿಹಾರ ಪ್ರಾಂತ್ಯಗಳಲ್ಲಿ ಜಾರಿ | ಬಾರಮಹಲ್, ಮದರಾಸು ಮೈಸೂರುಗಳಲ್ಲಿ ಜಾರಿ |
| ಜಮೀನ್ದಾರನು ಭೂಮಾಲೀಕನಾದನು | ರೈತನು ಭೂಮಾಲೀಕನಾದನು |
| ಸರ್ಕಾರ ಮತ್ತು ರೈತನ ನಡುವೆ ಭೂಮಾಲಿಕನಿದ್ದನು | ಸರ್ಕಾರ ಮತ್ತು ರೈತನ ನಡುವೆ ನೇರ ಸಂಪರ್ಕವಿತ್ತು |
| ನಿಗದಿತ ಮೊತ್ತಕ್ಕಿಂತ ಹೆಚ್ಚು ವಸೂಲಿ ಮಾಡುತ್ತಿದ್ದರು | ಹೆಚ್ಚಿನ ವಾರ್ಷಿಕ ಮೊತ್ತ ನಿಗದಿ ಮಾಡಲಾಗಿತ್ತು |
| ಅತಿವೃಷ್ಟಿ–ಅನಾವೃಷ್ಟಿಯಲ್ಲೂ ಕಂದಾಯ ವಸೂಲಿ | ಅತಿವೃಷ್ಟಿ–ಅನಾವೃಷ್ಟಿಯಲ್ಲೂ ಕಂದಾಯ ಮರುಪಾವತಿ |
| ರೈತರ ಬಹುಮುಖಿ ಶೋಷಣೆಯಾಯಿತು | ಹೆಚ್ಚು ರೈತರು ಸಾಲದ ಸುಳಿಗೆ ಸಿಲುಕಿದರು |

### 35.

- ಶಿವನಸಮುದ್ರದಲ್ಲಿ ಜಲವಿದ್ಯುತ್ ಕೇಂದ್ರ ಸ್ಥಾಪಿಸಿದರು.
- ಕೋಲಾರದ ಚಿನ್ನದ ಗಣಿ ಹಾಗೂ ಬೆಂಗಳೂರಿಗೆ ವಿದ್ಯುತ್ ಸರಬರಾಜು ಮಾಡಲಾಯಿತು.
- ಪ್ರಾಥಮಿಕ ಶಾಲೆಗಳಲ್ಲಿ ಶಿಕ್ಷಣ ಶುಲ್ಕವನ್ನು ರದ್ದುಗೊಳಿಸಿದರು.
- ಹೆಣ್ಣುಮಕ್ಕಳ ವಿದ್ಯಾಭ್ಯಾಸದ ಏಳಿಗೆಗೆ ನೆರವು ನೀಡಿದರು.
- ಮೈಸೂರು ವಿಶ್ವವಿದ್ಯಾಲಯವನ್ನು ಸ್ಥಾಪಿಸಿದರು.
- ಬೆಂಗಳೂರಿನಲ್ಲಿ ಭಾರತೀಯ ವಿಜ್ಞಾನ ಸಂಸ್ಥೆಯನ್ನು 1905ರಲ್ಲಿ ಸ್ಥಾಪಿಸಿದರು.
- ಬೆಳಗೊಳದ ಹತ್ತಿರ ಕಾವೇರಿನದಿಗೆ ಅಣೆಕಟ್ಟು ಕಟ್ಟಿದರು.
- ಹೊಸ ರೈಲು ಮಾರ್ಗಗಳನ್ನು ನಿರ್ಮಿಸಿದರು.
- ನ್ಯಾಯ ವಿಧಾಯಕ ಸಭೆಯನ್ನು ರಚಿಸಲಾಯಿತು.
- ಭದ್ರಾವತಿಯಲ್ಲಿ ಕಬ್ಬಿಣ ಮತ್ತು ಉಕ್ಕಿನ ಕಾರ್ಖಾನೆ, ಸಿಮೆಂಟ್ ಕಾರ್ಖಾನೆ, ಸ್ಥಾಪಿಸಿದರು.
- ಮಂಡ್ಯದಲ್ಲಿ ಸಕ್ಕರೆ ಕಾರ್ಖಾನೆ, ಬೆಂಗಳೂರಿನ ಸಾಬೂನು ಕಾರ್ಖಾನೆಗಳನ್ನು ಸ್ಥಾಪಿಸಿದರು.
- ಬೆಳಗೊಳದಲ್ಲಿ ರಾಸಾಯನಿಕ ವಸ್ತುಗಳ ಮತ್ತು ಕೃತಕ ಗೊಬ್ಬರಗಳ ಕಾರ್ಖಾನೆಯನ್ನು ಸ್ಥಾಪಿಸಿದರು.
- ಇವರ ಆಡಳಿತದಿಂದಾಗಿ ಮೈಸೂರು 'ಮಾದರಿ ರಾಜ್ಯ'ಎಂಬ ಹೆಸರನ್ನು ಪಡೆಯಿತು.

ಅಥವಾ

- ಏಕದೇವತಾರಾಧನೆಯನ್ನು ಪ್ರತಿಪಾದಿಸಿದರು.
- ಅರ್ಥಹೀನ ಆಚರಣೆಗಳನ್ನು ವಿರೋಧಿಸಿದರು.
- ಪ್ರತಿಯೊಬ್ಬ ವ್ಯಕ್ತಿಯು ಘನತೆಯಿಂದ ಬಾಳಬೇಕು.
- ಬಾಲ್ಯವಿವಾಹ & ಬಹುಪತ್ನಿತ್ವವನ್ನು ವಿರೋಧಿಸಿತು.
- ವಿಧವೆಯರ ದುಸ್ಥಿತಿಯನ್ನು ದೂರ ಮಾಡುವುದು.
- ಒಳ್ಳೆಯದು ಎಲ್ಲಿದ್ದರೂ ಅದನ್ನು ಸ್ವೀಕರಿಸುವುದು.
- ಇಂಗ್ಲಿಷ್ ಶಿಕ್ಷಣಕ್ಕೆ ಒತ್ತು ನೀಡಿದರು.

### 36.

- ಸಾಮಾಜಿಕ ಭಿನ್ನತೆಯ ಸೃಷ್ಟಿ
- ಸಮಾಜದಲ್ಲಿ ಪರಸ್ಪರ ಅಪನಂಬಿಕೆ
- ಭಯದ ವಾತಾವರಣ
- ಸಮಾಜದಲ್ಲಿ ಗುಂಪುಗಾರಿಕೆ
- ಆರ್ಥಿಕ ವೈಷಮ್ಯ
- ರಾಜಕೀಯ ಪೈಪೋಟಿ
- ಸಾಮಾಜಿಕ ನೆಮ್ಮದಿಯ ನಾಶ
- ದೇಶದ ಐಕ್ಯತೆ ಮತ್ತು ಸಮಗ್ರತೆಯ ನಾಶ
- ಸಾಂಸ್ಕೃತಿಕ ಬಹುರೂಪತೆಗೆ ಧಕ್ಕೆ
- ವ್ಯಕ್ತಿಗಳ ಜೀವ ಹಾಗೂ ಸೊತ್ತುಗಳ ನಾಶ

### 37.

- ನೀರಾವರಿ ಸೌಲಭ್ಯವನ್ನು ಒದಗಿಸುವುದು.
- ಜಲ ವಿದ್ಯುಚ್ಛಕ್ತಿಯನ್ನು ಉತ್ಪಾದಿಸುವುದು.
- ನದಿಗಳ ಪ್ರವಾಹವನ್ನು ನಿಯಂತ್ರಿಸುವುದು.
- ನೌಕಾಯಾನದ ಸೌಲಭ್ಯವನ್ನು ಒದಗಿಸುವುದು.
- ಗೃಹಬಳಕೆ ಮತ್ತು ಕೈಗಾರಿಕೆಗಳಿಗೆ ನೀರನ್ನು ಒದಗಿಸುವುದು.
- ಮಣ್ಣಿನ ಸವಕಳಿಯನ್ನು ನಿಯಂತ್ರಿಸುವುದು.
- ಮೀನುಗಾರಿಕೆಯ ಅಭಿವೃದ್ಧಿ ಮಾಡುವುದು.
- ಅರಣ್ಯ ಸಂಪತ್ತನ್ನು ವೃದ್ಧಿಸುವುದು.

## VI.

೩೮.

a) ಕರ್ಕಾಟಕ ಸಂಕ್ರಾಂತಿ ವೃತ್ತ

b) ಕೋರಮಂಡಲ ತೀರ

c) ಕೋಸಿ ನದಿ

d) ಪಂಪಸಾಗರ

